ಆ) ಗೊಬ್ಬರಗಳ ಮಾರಾಟವನ್ನು ಕೇಂದ್ರ ಸರ್ಕಾರ ಡಿ-ಕಂಟ್ರೋಲ್ ಮಾಡಿದ ನಂತರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶೇಕಡಾ ಎಷ್ಟನ್ನು ಸಬ್ಸಿಡಿ ರೂಪದಲ್ಲಿ ನೀಡುತ್ತಿದೆ? (ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನೀಡುತ್ತಿರುವ ಸಬ್ಸಿಡಿ ಮೊತ್ತವನ್ನು (ಕ್ವಿಂಟಾಲ್‌ಗೆ) ಪ್ರತ್ಯೇಕವಾಗಿ ತಿಳಿಸುವುದು?

ಆ) ಯಾವ ಆಧಾರದ ಮೇಲೆ ಸಬ್ಸಿಡಿಯನ್ನು ನಿಗದಿಗೊಳಿಸಲಾಗುತ್ತಿದೆ.

ಇ) ಯಾವಯಾವ ಏಜನ್ಸಿಯಿಂದ ಈ ಸಬ್ಸಿಡಿ ಸೌಲಭ್ಯ ರೈತರಿಗೆ ದೊರೆಯುತ್ತಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು)

ರಂಜಕ ಪೊಟ್ಯಾಷ್ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರಗಳನ್ನು ಆನಿಯಂತ್ರಣಗೊಳಿಸಿದ ಮೇಲೆ ಕೇಂದ್ರ ಸರ್ಕಾರ ಈ ರಸಗೊಬ್ಬರಗಳಿಗೆ ಸಬ್ಸಿಡಿಯನ್ನು ನೀಡುತ್ತದೆ. ಕೇಂದ್ರ ಸರ್ಕಾರ ವಿವಿಧ ರಸಗೊಬ್ಬರಗಳಿಗೆ ನೀಡುತ್ತಿರುವ ಸಬ್ಸಿಡಿ ಪ್ರತಿ ಕ್ವಿಂಟಾಲ್‌ಗೆ ಈ ಕೆಳಕಂಡಂತಿರುತ್ತದೆ(ರೂ.ಗಳಲ್ಲಿ)

1.	ಡಿ.ಎ.ಪಿ	: 100.00
2.	ಮುರೇಟ್ ಆಫ್ ಪೊಟ್ಯಾಷ್	: 100.00
3.	ಸೂಪರ್ ಫಾಸ್ಫೇಟ್	: 34.00
4.	ಕಾಂಪ್ಲೆಕ್ಸ್ ಗೊಬ್ಬರಗಳಿಗೆ (ಅವುಗಳಲ್ಲಿರುವ ರಂಜಕ ಮತ್ತು ಪೊಟ್ಯಾಷ್ ಅಂಶಗಳ ಆಧಾಂದ ಮೇಲೆ)	: 49.50 ರಿಂದ 99.90

ರಾಜ್ಯ ಸರ್ಕಾರ ಪ್ರತ್ಯೇಕವಾಗಿ ಸಬ್ಸಿಡಿಯನ್ನು ನೀಡುತ್ತಿಲ್ಲ.

ರಸಗೊಬ್ಬರಗಳಲ್ಲಿರುವ ರಂಜಕ ಮತ್ತು ಪೊಟ್ಯಾಷ್ ಅಂಶಗಳ ಆಧಾರದ ಮೇಲೆ ಸಬ್ಸಿಡಿಯನ್ನು ನಿಗದಿಪಡಿಸಲಾಗುತ್ತಿದೆ.

ಕೃಷಿ ಕೈಗಾರಿಕಾ ನಿಗಮ, ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಮತ್ತು ಖಾಸಗಿ ಮಾರಾಟ ಕೇಂದ್ರಗಳ ಮೂಲಕ ಈ ಸಬ್ಸಿಡಿ ಸೌಲಭ್ಯ ರೈತರಿಗೆ ದೊರೆಯುತ್ತಿದೆ.

ವಿಷಯ : - ತೊಗರಿ ಬೆಳೆಯ ಪರಿಹಾರವನ್ನು ನೀಡುವಲ್ಲಿ ಬೀದರ್ ಜಿಲ್ಲೆಯನ್ನು ಕಡೆಗಣಿಸಿರುವ

ಬಗ್ಗೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 363(642)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಔರಾದ್)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಇತ್ತೀಚೆಗೆ ತೊಗರಿ ಬೆಳೆ ನಾಶವಾದುದ್ದಕ್ಕಾಗಿ ರಾಜ್ಯ ಸರ್ಕಾರ ಪರಿಹಾರವನ್ನು ಘೋಷಿಸಿರುವುದು ನಿಜವಲ್ಲವೆ?

ಆ) ಹಾಗಿದ್ದಲ್ಲಿ ಪ್ರತಿ ಜಿಲ್ಲೆಗೆ ನೀಡಲಾಗಿದ್ದ ಪರಿಹಾರದ ಮೊತ್ತ ಎಷ್ಟು?

ಇ) ರಾಜ್ಯದಲ್ಲೇ ಅತ್ಯಂತ ಹಿಂದುಳಿದ ಜಿಲ್ಲೆಯಾದ ಹಾಗೂ ಹೆಚ್ಚಾಗಿ ತೊಗರಿ ಬೆಳೆಯನ್ನು ಬೆಳೆಯುತ್ತಿರುವ ಬೀದರ್ ಜಿಲ್ಲೆಯನ್ನು ಈ ಪರಿಹಾರ ನೀಡಿಕೆಯಲ್ಲಿ ಕಡೆಗಣಿಸಿರಲು ಕಾರಣಗಳೇನು?

ಈ) ಸರ್ಕಾರವು ಬೀದರ್ ಜಿಲ್ಲೆಗೂ ಸಹ ಪರಿಹಾರವನ್ನು ನೀಡುವ ಬಗ್ಗೆ ಕ್ರಮ

ಕೈಗೊಳ್ಳುವುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು)

ಹೈದರಾಬಾದ್ ಕರ್ನಾಟಕ ಪ್ರದೇಶದ ಗುಲ್ಬರ್ಗಾ ಜಿಲ್ಲೆ ಮತ್ತು ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆಯಲ್ಲಿ ತೊಗರಿ ಬೆಳೆ ನಾಶವಾದುದ್ದಕ್ಕಾಗಿ ರಾಜ್ಯ ಸರ್ಕಾರ ಪರಿಹಾರ ನೀಡಲು ಘೋಷಿಸಿರುತ್ತದೆ.

ಕೃಷಿ ಉತ್ಪಾದನೆ ಉತ್ತೇಜಕ ಕಾರ್ಯಕ್ರಮ ಯೋಜನೆಯಲ್ಲಿ ರೂ: 10.00 ಕೋಟಿಗಳನ್ನು ಗುಲ್ಬರ್ಗ ಮತ್ತು ಬಿಜಾಪುರ ಜಿಲ್ಲೆಗಳಿಗೆ ಮಂಜೂರಾತಿಯಾಗಿದ್ದು ಇದರಲ್ಲಿ ಸದ್ಯಕ್ಕೆ ರೂ: 4.75 ಕೋಟಿಗಳನ್ನು ಗುಲ್ಬರ್ಗಾ ಜಿಲ್ಲೆಗೆ ಮತ್ತು ರೂ: 0.25 ಕೋಟಿಗಳನ್ನು ಇಂಡಿ ತಾಲ್ಲೂಕು ಬಿಜಾಪುರ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ.

ತೊಗರಿ ಬೆಳೆಯನ್ನು ಪೂರ್ಣ ಬೆಳೆಯಾಗಿ ಬೆಳೆದು ಕಾಯಿಕೊರೆಯುವ ಹುಳುವಿನ ಬಾಧೆಯಿಂದ ಮತ್ತು ಹವಾಮಾನ ವೈಪರೀತ್ಯದಿಂದಾಗಿ ಹಾನಿಯಾದ ಭಾಗಗಳಲ್ಲಿ ಪರಿಹಾರ ನೀಡಲು ಜಾರಿಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿತ್ತು. ಅಲ್ಲದೇ ಶೇ. 75 ಭಾಗ ತೊಗರಿ ಬೆಳೆ ಹಾನಿಯಾದ ರೈತರು ಮಾತ್ರ ಈ ಯೋಜನೆಗೆ ಅರ್ಹರಾಗುವರು.

ಆದರೆ ಬೀದರ್ ಜಿಲ್ಲೆಯಲ್ಲಿ ತೊಗರಿ ಬೆಳೆಯೊಂದಿಗೆ ಜೋಳ, ಸಜ್ಜೆ ಮತ್ತು ಎಳ್ಳಿನೊಂದಿಗೆ ಮಿಶ್ರ ಬೆಳೆಯಾಗಿ ಬೆಳೆಯುತ್ತಿದ್ದು, ಬಾಧೆಗೆ ಒಳಗಾದ ಕ್ಷೇತ್ರವು ಶೇ: 50ರಷ್ಟಿರುತ್ತದೆ; ಆದುದರಿಂದ ಪರಿಹಾರ ನೀಡಲು ಯೋಜನೆ ವ್ಯಾಪ್ತಿಗೆ ಬಂದಿರುವುದಿಲ್ಲ.

ಬೀದರ್ ಜಿಲ್ಲೆಗೆ ಪರಿಹಾರ ನೀಡುವ ಯಾವುದೇ ಯೋಜನೆ · ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ವಿಷಯ: – ಮಂಡಲ ಪಂಚಾಯಿತಿಯ ಜವಾಹರ್ ರೋಜ್‌ಗಾರ್ ಯೋಜನೆಯ ಮಂಜೂರಾತಿ

ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 364(9)

ಶ್ರೀ ಬಿ. ಶಿವರಾಮು(ಗಂಡಸಿ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1993-94ನೇ ಸಾಲಿನ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಹಾಸನ ಜಿಲ್ಲೆಯ ಮಂಡಲಪಂಚಾಯತಿಗಳಿಗೆ ಒದಗಿಸಿರುವ ಹಣವೆಷ್ಟು?

ಆ) ಅದರಲ್ಲಿ 31-7-93ರವರೆಗೆ ಖರ್ಚಾದ ಹಣ ಮತ್ತು ಬಿಡುಗಡೆಯಾಗಿರುವ ಹಣ ಎಷ್ಟು?

ಇ) ಕ್ರಿಯಾ ಯೋಜನೆಗಳಿಗೆ ಯಾವಾಗ ಮಂಜೂರಾತಿ ದೊರೆತಿದೆ ಮತ್ತು ನಿಯಮಾವಳಿಗಳನ್ನು ಅನುಸರಿಸಿ ಕ್ರಿಯಾ ಯೋಜನೆಗಳಿಗೆ ಮಂಜೂರಾತಿ ದೊರೆತಿದೆಯೆ?

ಈ) ಮಂಡಲಪಂಚಾಯತಿಯ ಕ್ರಿಯಾ ಯೋಜನೆಗೆ ಮಂಜೂರಾತಿಗೆ ಅನುಸರಿಸಬೇಕಾದ ನಿಯಮಗಳೇನು?

ಉ) ಗ್ರಾಮ ಸಭೆಗಳು ನಡೆದಿದೆಯೇ ಹಾಗೂ ಅವುಗಳು ಗ್ರಾಮ ಸಭೆಯ ಬೇಡಿಕೆಯಂತೆ ಕ್ರಿಯಾ ಯೋಜನೆ ಮಂಜೂರಾತಿ ಪಡೆದಿದೆಯೇ?